**ಎಂವಿಸಿ ಸಂಖ್ಯೆಃ 112/2021 ಪಿಡಬ್ಲೂಃ1**

**ದಿನಾಂಕಃ 08-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ನಾನು ಈ ಹಿಂದೆ ಹಾವೇರಿ ನ್ಯಾಯಾಲಯದಲ್ಲಿ ಎಂವಿಸಿ ನಂಬ್ರ 274/2000 ನೇದ್ದರ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಸಾಕ್ಷಿ ಅರ್ಜಿ ಸಲ್ಲಿಸಿದ ಬಗ್ಗೆ ಒಪ್ಪಿಕೊಂಡಿದ್ದರಿಂದ ಈಗ ಹಾಜರುಪಡಿಸಿದ ದೃಢೀಕೃತ ಅರ್ಜಿಯ ನಕಲು ಪ್ರತಿಯನ್ನು ಅಭಿಮುಖವಾಗಿ ನಿಆರ್-1 ಎಂದು ಗುರುತಿಸಲಾಯಿತು.

ಎಂವಿಸಿ ನಂಬ್ರ 274/2000 ನೇದ್ದರಲ್ಲಿ ನನ್ನ ಸಾಕ್ಷಿ ಪ್ರಮಾಣ ಪತ್ರ ಮತ್ತು ಹೇಳಿಕೆಯ ದೃಢೀಕೃತ ಪ್ರತಿಯನ್ನು ನೋಡಿಗುರುತಿಸಿದ್ದು ಅದನ್ನು ಅಭಿಮುಖವಾಗಿ ನಿಆರ್-2 ಎಂದು ಗುರುತಿಸಲಾಯಿತು.

ಎಂವಿಸಿ ನಂಬ್ರ 274/2000 ನೇದ್ದರಲ್ಲಿ ನಾನು ಸಲ್ಲಿಸಿದ್ದ ಗಾಯದ ಪ್ರಮಾಣ ಪತ್ರ, ಡಿಸ್ಚಾರ್ಜ ದಾಖಲೆ ಮತ್ತು ಆಸ್ಪತ್ರೆಯ ವೈದ್ಯಕೀಯ ವೆಚ್ಚ ಹಾಗೂ ಆಸ್ಪತ್ರೆಯ ಇತರ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಅಭಿಮುಖವಾಗಿ ನಿಆರ್-3 ಎಂದು ಗುರುತಿಸಲಾಯಿತು.

ಎಂವಿಸಿ ನಂಬ್ರ 274/2000 ನೇದ್ದರಲ್ಲಿ ತೀರ್ಪು ಮತ್ತು ಡಿಕ್ರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಅಭಿಮುಖವಾಗಿ ನಿಆರ್-4 ಮತ್ತು 5 ಎಂದು ಗುರುತಿಸಲಾಯಿತು.

ಸದ್ರಿ ಈ ಹಳೆಯ ತೀರ್ಪು ಮತ್ತು ದಾಖಲೆಗಳಲ್ಲಿ ನಾನು ನನಗೆ ಬಲಗಾಲಿನ ಮಂಡಿಗೆ ಆದ ಗಾಯಕ್ಕೆ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಸದ್ರಿ ಆ ಅರ್ಜಿಯಲ್ಲಿ ಆದ ಗಾಯಗಳಿಗೆ ಸಂಬಂಧಿಸಿದಂತೆ ಅದೇ ರೀತಿಯ ಗಾಯಗಳಿಗೆ ಸಂಬಂಧಿಸಿದಂತೆ ಈಗ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಸದ್ರಿ ನನ್ನ ಹಳೆಯ ದಾಖಲೆಗಳನ್ನು ಮತ್ತು ಈಗ ಹಾಜರುಪಡಿಸಿದ ದಾಖಲೆಗಳನ್ನು ಮೆಡಿಕಲ್ ಕೌನ್ಸಿಲ್‌ಗೆ ಕಳುಹಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸದ್ರಿ ನನ್ನ ಅರ್ಜಿಯಲ್ಲಿ ಈ ಹಿಂದೆ ನನಗೆ ಆದ ಗಾಯಗಳಿಗೆ ಸಂಬಂಧಿಸಿದಂತೆ ನನ್ನ ಅರ್ಜಿಯಲ್ಲಿ ತಿಳಿಸಲು ನನಗೆ ಯಾವುದೇ ತೊಂದರೆ ಇದ್ದಿರಲಿಲ್ಲ. ಸದ್ರಿ ಈಗ ನನಗೆ ಚಿಕಿತ್ಸೆ ಕೊಟ್ಟ ವೈದ್ಯರನ್ನು ಸಾಕ್ಷಿ ಮಾಡಿಸಲು ಯಾವುದೇ ತೊಂದರೆ ಇಲ್ಲ. ನಾನು ವೈದ್ಯರ ಬಳಿ ಅಪಘಾತವಾದ ನಂತರ ಹಳೆಯ ಗಾಯದ ಬಗ್ಗೆ ನಾನು ತಿಳಿಸಿಲ್ಲ.

ನಾನು ಮೊದಲಿನಂತೆ ಈಗಲೂ ಸಹ ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿ ಗುಣಮುಖ ಹೊಂದಿರುತ್ತೇನೆ ಎಂದು ವೈದ್ಯರ ಬಳಿ ದಾಖಲೆ ಪಡೆದು ನಂತರ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಹಳೆಯ ಅಪಘಾತದಲ್ಲಿ ಆದ ಗಾಯಗಳೇ ಬೇರೆ ಮತ್ತು ಈಗ ಆದ ಅಪಘಾತದ ಗಾಯಗಳೇ ಬೇರೆಯಾಗಿದ್ದರಿಂದ ಪುನಃ ಅದನ್ನು ಹೇಳುವ ಪ್ರಶ್ನೆ ಬರುವುದಿಲ್ಲ ಎಂದು ಹೇಳುತ್ತಾರೆ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ತಪ್ಪು ನಿರೂಪಣೆ ಮಾಡಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

(ಓ.ಹೇ.ಕೇ.ಸ.)

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ